# ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)


MD RGRHCL 01 GEN 64 2002 /16257 Dated: 31.07.2012

ರಿಗೆ,
ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು,
ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳ ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗಳು,
ರಾಜ್ಯದ ಎಲ್ಲಾ ತಾಲ್ಲೂಕು ನೋಡಲ್ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ,

ಸನ್ಮಾನ್ಯರೇ,

ವಿಷಯ: : ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳು ಹೊಂದಿರುವ ಬಿ.ಪಿ.ಎಲ್. ಪಡಿತರ ಚೀಟಿಯನ್ನು ಆದಾಯ ಪ್ರಮಾಣ ಪತ್ರವನ್ನಾಗಿ ಪರಿಗಣಿಸುವ ಬಗ್ಗೆ.

ಉಲ್ಲೇಖ 1 ಸರ್ಕಾರದ ಆದೇಶ ಸಂಖ್ಯೆ:ವಇ/137/ಹೆಚ್‌ಎಎಂ/2011, ದಿನಾಂಕ: 19.01.2012

2 ನಿಗಮದ ಪತ್ರ ಸಂಖ್ಯೆ: MD RGRHCL 01 GEN 61 2002, Dated: 26.05.2012

3 ಸರ್ಕಾರದ ಪತ್ರ ಸಂಖ್ಯೆ: ವಇ/155/ಹೆಚ್‌ಎಎಂ/2012, ದಿನಾಂಕ: 11.07..2012

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (2)ರ ಸರ್ಕಾರದ ಆದೇಶದಲ್ಲಿ ಎಲ್ಲಾ ವಸತಿ ಯೋಜನೆಗಳಡಿ ಹಾಗೂ ಎಲ್ಲಾ ನಿವೇಶನ ಯೋಜನೆಗಳಡಿ ಆಯ್ಕೆಯಾಗುವ ಫಲಾನುಭವಿಗಳ ವಾರ್ಷಿಕ ಆದಾಯ ಮಿತಿಯನ್ನು ರೂ. 11,800/–ಗಳಿಂದ ಗರಿಷ್ಠ ರೂ. 32,000/–ಕ್ಕೆ ಹೆಚ್ಚಿಸಲಾಗಿರುತ್ತದೆ.

ಸರ್ಕಾರದ ಆದೇಶದಂತೆ ವಿವಿಧ ವಸತಿ ಹಾಗೂ ನಿವೇಶನ ಯೋಜನೆಗಳಡಿ ಆಯ್ಕೆಯಾಗುವ ಫಲಾನುಭವಿಗಳು ಗ್ರಾಮ ಪಂಚಾಯತಿ ಕಛೇರಿಗೆ ಸಲ್ಲಿಸಬೇಕಾದ ಆದಾಯ ಪ್ರಮಾಣ ಪತ್ರವನ್ನು ಪಡೆಯುವಲ್ಲಿ ಉಂಟಾಗುತ್ತಿರುವ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು, ಮಾನ್ಯ ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಸಹಿತ ಹಲವಾರು ಯೋಜನೆಗಳ ಸವಲತ್ತನ್ನು ಪಡೆಯಲು ಬಿ.ಪಿ.ಎಲ್. ಪಡಿತರ ಚೀಟಿಯನ್ನು ಆದಾಯದ ಧೃಢಪತ್ರವನ್ನಾಗಿ ಪರಿಗಣಿಸುತ್ತಿರುವಂತೆ ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾಗುವ ಫಲಾನುಭವಿಗಳು ಹೊಂದಿರುವ ಬಿ.ಪಿ.ಎಲ್. ಪಡಿತರ ಚೀಟಿಯನ್ನೇ ಆದಾಯ ಪ್ರಮಾಣ ಪತ್ರವನ್ನಾಗಿ ಪರಿಗಣಿಸುವಂತೆ ಸರ್ಕಾರದ ಆದೇಶವನ್ನು ಹೊರಡಿಸುವಂತೆ ಕೋರಿ ಉಲ್ಲೇಖ (2)ರ ನಿಗಮದ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಉಲ್ಲೇಖ (3)ರಲ್ಲಿ ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳು ಹೊಂದಿರುವ ಬಿ.ಪಿ.ಎಲ್. ಪಡಿತರ ಚೀಟಿಯನ್ನು ಅಥವಾ ಆದಾಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದಲ್ಲಿ ಅದನ್ನೂ ಪರಿಗಣಿಸಬಹುದು. ಈ ಎರಡು ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಸಲ್ಲಿಸಿದರೆ ಸಾಕೆಂದು, ಈ ಅನುಮತಿಯು ವಸತಿ ಯೋಜನೆಯಡಿ ಮನೆ/ನಿವೇಶನ ಪಡೆಯಲು ಆಯ್ಕೆಗೊಳ್ಳುವ ಫಲಾನುಭವಿಗಳಿಗೆ ಮಾತ್ರ ಅನ್ವಯವಾಗುವುದಾಗಿ ತಿಳಿಸಿರುತ್ತದೆ.

ಆದುದರಿಂದ, ವಿವಿಧ ವಸತಿ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳಿಂದ ಪಡೆದುಕೊಳ್ಳಬಹುದಾದ ಆದಾಯ ಪ್ರಮಾಣ ಪತ್ರದ ಬದಲಿಗೆ ಆದಾಯ ಪ್ರಮಾಣ ಪತ್ರ ಅಥವಾ



ನೊಂದಾಯಿತ ಕಛೇರಿ : #1,2,3,4, ಐ.ಟಿ. ಪಾರ್ಕ್, 1ನೇ ಮಹಡಿ, 4ನೇ ಮುಖ್ಯರಸ್ತೆ, ರಾಜಾಜಿನಗರ ಕೈಗಾರಿಕಾ ಪ್ರದೇಶ, ರಾಜಾಜಿನಗರ, ಬೆಂಗಳೂರು – 560 010.
ಕಛೇರಿ : 91-80-2311 8888, Extn.: ಪಿಎ ವಿಭಾಗ- 25 to 30, ತಾಂತ್ರಿಕ - 34 to 36, ಆರ್ಥಿಕ - 37 to 40, ಆಡಳಿತ - 42 & 43, ಗಣಕ ವಿಭಾಗ- 45 to 47,

ಬಿ.ಪಿ.ಎಲ್. ಪಡಿತರ ಚೀಟಿ ಈ ಎರಡರಲ್ಲಿ ಯಾವುದಾದರೂ ಒಂದನ್ನು ಪಡೆದುಕೊಳ್ಳಬಹುದಾಗಿರುತ್ತದೆ. ಇಂತಹ ಫಲಾನುಭವಿಗಳ ಹೆಸರುಗಳನ್ನು ನಿಗಮದ ವೆಬ್‌ಸೈಟಿನಲ್ಲಿ ನಮೂದಿಸುವಾಗ ಸದರಿ ಫಲಾನುಭವಿಗಳು ಹೊಂದಿರುವ ಬಿ.ಪಿ.ಎಲ್. ಪಡಿತರ ಚೀಟಿ ಸಂಖ್ಯೆಯನ್ನು (ಇಂದಿರಾ ಆವಾಸ್ ಯೋಜನೆಯನ್ನು ಹೊರತುಪಡಿಸಿ) ತಪ್ಪದೇ ನಮೂದಿಸುವುದು. ಫಲಾನುಭವಿಗಳಿಂದ ಪಡೆದ ಆದಾಯ ಪ್ರಮಾಣ ಪತ್ರ ಅಥವಾ ಬಿ.ಪಿ.ಎಲ್. ಪಡಿತರ ಚೀಟಿಗಳ ನಕಲು ಪ್ರತಿಯನ್ನು ಆಯಾ ಫಲಾನುಭವಿಯ ಕಡತದಲ್ಲಿರಿಸುವುದು.

ಗೌರವಗಳೊಂದಿಗೆ,

ತಮ್ಮ ವಿಶ್ವಾಸಿ,

ಎಸ್. ಎಸ್. ಮಹಾದೇವ ಪ್ರಸಾದ್
ವ್ಯವಸ್ಥಾಪಕ ನಿರ್ದೇಶಕರು (ಪ್ರಭಾರ)

ಪ್ರತಿಯನ್ನು:

1. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಗಳಿಗೆ ಕಾರ್ಯನಿರ್ವಾಹ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ ಇವರ ಮುಖಾಂತರ.